ಕರ್ನಾಟಕ ವಿಧಾನಸಭೆ

ಶುಕ್ರವಾರ 12ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

1. <u>ಅಧ್ಯಕ್ಷರ ಅಪ್ಪಣೆ ಮೇರೆಗೆ.</u>

ಬೆಂಗಳೂರಿನ ಎ.ಜಿ. ಕಛೇರಿಯಲ್ಲಿ ತಮಿಳರ ನೇಮಕಾತಿ ಬಗ್ಗೆ.

+ ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ ನಾನು ತಮ್ಮ ಮೂಲಕ ಒಂದು ತೀರ್ಮಾನವನ್ನು ಹೇಳುತ್ತೇನೆ, ಏನೆಂದರೆ, ಎ.ಜಿ. ಕಛೇರಿಯಲ್ಲಿ ತಮಿಳು ಅಧಿಕಾರಿಗಳನ್ನು ನೇಮಕ ಮಾಡಬಾರದೆಂದು ರಾಜ್ಯಾದ್ಯಂತ ನಿರಂತರ ಹೋರಾಟ ನಡೆಯಿತು. ಇದರ ಫಲವಾಗಿ ಪ್ರಧಾನಮಂತ್ರಿ ಮತ್ತು ಕೇಂದ್ರದ ಗೃಹ ಸಚಿವರು ಏನು ಆದೇಶ ಹೊರಡಿಸಿದ್ದಾರೆ, ಅದನ್ನು ವಾಪಸ್ ಪಡೆದು ಅಲ್ಲಿಗೆ ತಮಿಳರ ನೇಮಕ ಮಾಡುವುದಿಲ್ಲವೆಂದು ಹೇಳಿದರು. ಆದರೆ, ಈಗ ಇದ್ದಕ್ಕಿದ್ದಹಾಗೆ ಕರ್ನಾಟಕ ರಾಜ್ಯಕ್ಕೆ ಮತ್ತು ಕನ್ನಡಿಗರಿಗೆ ಬರಸಿಡಿಲು ಬಡಿದಂತಾಗಿದೆ. ಅತ್ಯಂತ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೆ ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಯಾವ ತಮಿಳು ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಂಡಿದ್ದರೋ ಅವರನ್ನೇ, ಅದೇ ಕಾರ್ಯಾಲಯದಲ್ಲಿ ಮುಂದುವರೆಸುತ್ತೇವೆಂಬ ಮಾತನ್ನು ಹೇಳಿದ್ದಾರೆ. ನಿಜವಾಗಿಯೂ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಮತ್ತು ನೋವಿನ ಸಂಗತಿ ಕೂಡ ಹೌದು.

ಅಧ್ಯಕ್ಷರು :— ಮುಖ್ಯಮಂತ್ರಿಗಳು ಇದ್ದಾಗ ನಿಮಗೆ ಅವಕಾಶ ಕೊಡುತ್ತೇನೆ. ಆಮೇಲೆ, ತಾವು ಈ ವಿಷಯವನ್ನು ರೈಸ್ ಮಾಡಿ.

ಶ್ರೀ ಮಾಟಾಳ್ ನಾಗರಾಜ್ :— ಇಷ್ಟೊಂದು ಹೋರಾಟ ಮಾಡಿದ ಮೇಲೆಯೂ ಹೀಗಾಗಿದೆ. ಒಂದು ಕಡೆ ಯಾರು ಬೇಕಾದರೂ ಕರ್ನಾಟಕ ರಾಜ್ಯದೊಳಗೆ ಬರಬಹುದು. ತಮಿಳರು, ಮಲೆಯಾಳಿಗಳು, ಗುಜರಾತಿಗಳು, ಮಾರವಾಡಿಗಳು ಬರುವವರನ್ನು ತಪ್ಪಿಸುವುದಕ್ಕೆ ಆಗುವುದಿಲ್ಲವೆನ್ನುತ್ತಾರೆ. ಉದ್ಯೋಗದಲ್ಲಿ ನೋಡಿದರೆ ಈ ಪರಿಸ್ಥಿತಿ. ಉದ್ಯೋಗದ ಬಗ್ಗೆ ತಮಿಳುನಾಡಿನಲ್ಲಿ ಸರ್ವಪಕ್ಷದವರೂ ಹೋಗಿ, ಇದು ಅನ್ಯಾಯವೆಂದು ಹೇಳಿ ಪ್ರಧಾನ ಮಂತ್ರಿಯವರಿಗೆ ಮನವಿಯನ್ನು ಮಾಡಿಕೊಂಡರು. ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುವುದೇನೆಂದರೆ, ಕರ್ನಾಟಕದ ಸರ್ವಪಕ್ಷದವರೂ ಹೋಗಿ ಮತ್ತೆ ಏನು ಆದೇಶವನ್ನು

ಹೊರಡಿಸಿದ್ದಾರೆ, ಅದನ್ನು ತಡೆಹಿಡಿಯಬೇಕು. ಈ ಬಗ್ಗೆ ಸರ್ಕಾರ ಸ್ಪಷ್ಟ ನಿರ್ಧಾರಕ್ಕೆ ಬರಬೇಕು. ಇಲ್ಲವಾದರೆ, ಕರ್ನಾಟಕ ರಾಜ್ಯಾದ್ಯಂತ ಗಂಭೀರ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದುದರಿಂದ, ನನ್ನ ಕಳಕಳಿಯ ಮನವಿಯೇನೆಂದರೆ, ಮತ್ತೆ ಅಲ್ಲಿಗೆ ತಮಿಳು ಅಧಿಕಾರಿಗಳನ್ನು ನೇಮಕ ಮಾಡುವುದಾದರೆ, ಕರ್ನಾಟಕ ರಾಜ್ಯಾದ್ಯಂತ ದೊಡ್ಡ, ಘೋರವಾದ ಚಳವಳಿ ನಡೆಯುತ್ತದೆ. ಈ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕು. ಈ ಪರಿಸ್ಥಿತಿ ಮುಂದೆ ಹೋಗಬಾರದು. ಸರ್ಕಾರ ಈ ಬಗ್ಗೆ ಸರ್ವಪಕ್ಷ ನಿಯೋಗವನ್ನು ಪ್ರಧಾನಿಯವರ ಹತ್ತಿರ ಕರೆದುಕೊಂಡು ಹೋಗಬೇಕು, ಗೃಹಸಚಿವರೂ ಇದನ್ನು ನೋಡಬೇಕು. ಕೇವಲ ದ್ವಂದ್ವ ತೀರ್ಮಾನಕ್ಕೆ ಬಂದಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಕೇಂದ್ರ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ನಾನು ಧರಣಿ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಗೆಂದು ಎದ್ದು ಹೊರಟರು)

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಶ್ರೀ ವಾಟಾಳ್ ನಾಗರಾಜ್‌ರವರು ಇವತ್ತು ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಪ್ರಸ್ತಾಪಿಸಿ, ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅವರ ಭಾವನೆಗೆ ನಾನೂ ನನ್ನ ಧ್ವನಿಗೂಡಿಸುತ್ತಾ, ಒಂದು ವಿಚಾರವನ್ನು ಹೇಳುವುದಕ್ಕಿಷ್ಟಪಡುತ್ತೇನೆ. ಎ.ಜಿ. ಕಛೇರಿಯಲ್ಲಿ ಗ್ರೂಪ್-ಸಿ ಮತ್ತು ಡಿಯಲ್ಲಿ ಏನು 23 ಜನರ ನೇಮಕವಾಗಿತ್ತು, ಆಗ ನಾನು ವೈಯಕ್ತಿಕವಾಗಿ ನನ್ನ ಪಕ್ಷದ ಕಡೆಯಿಂದ ಜೊತೆಗೆ ಸಾರ್ವಜನಿಕ ಲಿಕ್ಷಪತ್ರಗಳ ಸಮಿತಿಯ ಸದಸ್ಯನಾಗಿ ಇದರ ವಿರುದ್ಧ ಕೇಂದ್ರದವರೆಗೆ ಹೋಗಿ ಬಂದೆವು. ಅವತ್ತು ಶ್ರೀ ವಾಟಾಳ್ ನಾಗರಾಜ್ ರವರು ಆ ಸಮಿತಿಯಲ್ಲಿ ಒಬ್ಬರು ಸದಸ್ಯರು. ಅಂದು ಬರುತ್ತೇವೆಂದು ಹೇಳಿದವರು ಡೆಲ್ಲಿಗೆ ಬರಲಿಲ್ಲ. ನಾವು 3 ದಿವಸಗಳು ಕಾದೆವು. ನಂತರ, ನಾವು ಗೃಹಸಚಿವರು ಮತ್ತು ಅಲ್ಲಿನ ಕಾರ್ಯದರ್ಶಿಗಳನ್ನು ಭೇಟಿಯಾದೆವು. ನಿಮ್ಮ ಕೈಯಲ್ಲಿ ಆಗಿಲ್ಲದಿರುವುದನ್ನು ನಾನು ಮಾಡಿದೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :— ಇವರು ತಮ್ಮ ಮಾತನ್ನು ಪೂರ್ತಿ ಮಾಡಲಿ. ಇವರಿಗೆ ಬೇಕಾದ ಹಾಗೆ ಧರಣಿ ಮಾಡುತ್ತಾರೆ. ಬೇರೆಯವರು ಮಾತನಾಡುವುದಕ್ಕೆ ಅವಕಾಶ ಬೇಡವೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ನನ್ನ ಮಗನ ಮದುವೆ ಸಂದರ್ಭದಲ್ಲಿ... ನನ್ನ ಮಗನ ಮದುವೆಯಿಂದ ನನ್ನ ಪರಿಸ್ಥಿತಿ....

(ಗೊಂದಲ)

ಅಧ್ಯಕ್ಷರು :— ನಾನು ರೆಗ್ಯುಲೇಟ್ ಮಾಡುತ್ತೇನೆ. ನೀವೇಕೆ ಹೇಳಬೇಕು? ಶ್ರೀ ಸುರೇಶ್ ಕುಮಾರ್‌ರವರು ಏನು ಹೇಳುತ್ತಾರೆ ಅದನ್ನೆಲ್ಲಾ ಹೇಳಲಿ. ನಂತರ, ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ :— ನಾವೂ ಶ್ರೀ ವಾಟಾಳ್‌ರ ಬಗ್ಗೆ ಅಪಾದನೆ ಮಾಡುತ್ತಿಲ್ಲ. ಸಂಗತಿಗಳನ್ನು ಹೇಳುತ್ತಿದ್ದೇನಷ್ಟೆ. ಅವತ್ತು ನಾವು ಪ್ರತಿದಿಮಸ ಬೆಂಗಳೂರನ್ನು ಸಂಪರ್ಕಿಸಿ, ನಮ್ಮ ಪ್ರಗತಿಯನ್ನು ಹೇಳಿ, ಇವತ್ತು ನಾವು ಕಾರ್ಯದರ್ಶಿಯವರನ್ನು ಭೇಟಿಯಾದೆವು, ಇವತ್ತು ಸಿ.ಎ.ಜ.ಯವರನ್ನು ಭೇಟಿಯಾದೆವು ನಾಳೆ ಶ್ರೀ ಅಧ್ವಾನಿಯವರನ್ನು ಭೇಟಿ ಮಾಡುತ್ತಿದ್ದೇವೆ, ಪರಿಸ್ಥಿತಿ ಹೀಗಿದೆ ಎಂದು ಹೇಳುತ್ತಿದ್ದೆವು ಮತ್ತು ಅವರೂ ಅದನ್ನು ತಿಳಿದುಕೊಳ್ಳುತ್ತಿದ್ದರು. ನಾವು ಅದರಲ್ಲಿ ಯಶಸ್ವಿಯಾಗಿ ಬಂದಿದ್ದೇವೆ. 19 ಜನರನ್ನು ಬೇರೆಡೆಗೆ ನೇಮಕ ಮಾಡುತ್ತೇವೆಂಬ ಆದೇಶ ಕೂಡ ನಮಗೆ ದೊರೆಯಿತು. ಇವತ್ತು ಪತ್ರಿಕೆಯಲ್ಲಿ, ಪ್ರಧಾನಿಗಳು ಈ ರೀತಿ ಪತ್ರ ಬರೆದಿದ್ದಾರೆಂದು ಬಂದಿದೆ. ಇವತ್ತು ಕೂಡ ನಮ್ಮ ನಿಲುವು ಸ್ಪಷ್ಟವಾಗಿದೆ. ಸಾಮಾನ್ಯ ಜನರ ಜೊತೆಗೆ ಕರ್ನಾಟಕ ರಾಜ್ಯದ ವ್ಯವಹಾರ ಕನ್ನಡವಾಗಿರಬೇಕು, ಸರೋಜಿನಿ ಮಹಿಷಿ ವರದಿಯನ್ನು ನಾವು ಒಪ್ಪಿಕೊಂಡಿರುವುದರಿಂದ, ಆ ವರ್ಗಕ್ಕೆ ಕನ್ನಡ ಬಲ್ಲ ಜನರನ್ನೇ ನೇಮಕ ಮಾಡಬೇಕೆಂಬುದು ನಮ್ಮ ನಿಲುವು. ಶ್ರೀ ವಾಟಾಳ್ ನಾಗರಾಜ್ ರವರು ಹೇಳುವ ಹಾಗೆ, ಇನ್ನು ಮುಂದೆ ಸರ್ಕಾರ ಈ ವಿಷಯದ ಬಗ್ಗೆ ಕೇಂದ್ರದ ಜೊತೆ ಮಾತನಾಡಿ ಏಕೆಂದರೆ, ನಾವು ಪಿ.ಎ.ಸಿಯಿಂದ ಮಾಡುವ ಕೆಲಸವನ್ನು ಮಾಡಿ ಯಶಸ್ವಿಯಾಗಿದ್ದೆವು, ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಂಡು, ಇದರಿಂದಾಗಿ ರಾಜ್ಯದಲ್ಲಿ ಏನು ಭಾವನೆ ಉಂಟಾಗಿದೆ, ಇಡೀ ರಾಜ್ಯದಲ್ಲಿ ಮತ್ತೊಂದು ಗಲಭೆಯ ವಾತಾವರಣ ಮೂಡಬಹುದು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಕೂಡಲೇ ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿತು ಕೇಂದ್ರದ ಜೊತೆ ಮಾತನಾಡಬೇಕು. ಈಗ ಈ ರೀತಿ ಪ್ರಧಾನಿಗಳು ಪತ್ರ ಬರೆದಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ, ಅದನ್ನು ವಾಪಸ್ಸು ತೆಗೆದುಕೊಂಡು ಕನ್ನಡಿಗರ ಭಾವನೆಯನ್ನು, ಬೆಂಗಳೂರಿನಲ್ಲಿ ಎ.ಜಿ. ನೌಕರರ ಭಾವನೆಯನ್ನರಿತುಕೊಂಡು, ಈ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಲು ರಾಜ್ಯ ಸರ್ಕಾರ ಪ್ರಯತ್ನಿಸಬೇಕು.

ಶ್ರೀ ವಾಟಾಳ್ ನಾಗರಾಜ್:— ನಾನು ಮೊದಲೇ ಸ್ಪಷ್ಟಪಡಿಸಿದ್ದೇನೆ. ನನ್ನ ಜೀವನದುದ್ದಕ್ಕೂ ನಾನು ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಬಿಟ್ಟು ಹೋಗುವುದಿಲ್ಲ. ನನ್ನ ಉಸಿರೇ ಕನ್ನಡ. ನನ್ನ ನಾವು ಕನ್ನಡದಲ್ಲೇ ಅಂತ್ಯವಾಗುತ್ತದೆ. ಅದರ ಬಗ್ಗೆ ಬೇರೆ ಮಾತಿಲ್ಲ. ನನ್ನ ಜೀವನದುದ್ದಕ್ಕೂ ಕನ್ನಡಕ್ಕಾಗಿ ಹೋರಾಟ ಮಾಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನನ್ನ ರೀತಿ ಜೈಲಿಗೆ ಹೋಗಿ, ಲಾಕಪ್‌ನಲ್ಲಿ ಬೂಟ್ಸ್ ಏಟು ತಿಂದು ಹೋರಾಟ ಮಾಡಿದ ಯಾರಾದರೊಬ್ಬ ರಾಜಕಾರಣಿ ಇದ್ದರೆ ಹೇಳಿ, ನಿಮ್ಮ ಕಾಲಕೆಳಗೆ ನಾನು ತೂರುತ್ತೇನೆ. ನಾನು ಈ ಸದನದೊಳಕ್ಕೆ ಬರುವುದಿಲ್ಲ. ನಾನು ಆ ರೀತಿ ಆಷಾಢಭೂತಿ ಎಂದೂ ಆಗುವುದಿಲ್ಲ. ನನ್ನ ಜೀವನದಲ್ಲಿಂದೂ ಹಾಗೆ ಆಗುವುದಕ್ಕೆ ಸಾಧ್ಯವಿಲ್ಲ. ಕಾಲಕಾಲಕ್ಕೆ ಕೆಲವು ರಾಜಕಾರಣಿಗಳು ಅಂಥ ಆಷಾಢಭೂತಿಗಳಾಗಿರಬಹುದು. ಆದರೆ, ನಾನು ಆ ರೀತಿ ಆಗುವುದಿಲ್ಲ. ಈಗಲೂ ಹೇಳುತ್ತಿದ್ದೇನೆ, ಈ ನಾಡಿನ ಅಭ್ಯುದಯಕ್ಕಾಗಿ ಆ ರೀತಿ ಪಕ್ಷಾಂತರ ರಾಜಕಾರಣ ಮಾಡಿದ್ದರೆ, ಆ ದಿಕ್ಕೇ ಬೇರೆಯಾಗಿರುತ್ತಿತ್ತು, ಈ ನಾಡಿನ ಉಳಿವಿಗಾಗಿ ನಾನು ಹೋರಾಡುತ್ತಿದ್ದೇನೆ. ಕೇಂದ್ರ ಸರ್ಕಾರ ಒಂದು ಆದೇಶ ಹೊರಡಿಸುವುದು, ತಮಿಳು ನಾಡಿನ ಒತ್ತಾಯಕ್ಕೆ ಮಣಿದು ಒಂದು ಆದೇಶ ಹೊರಡಿಸುವುದು, ಇನ್ನೊಬ್ಬರ ಒತ್ತಾಯಕ್ಕೆ ಒಂದು ಆದೇಶ ಹೊರಡಿಸುವುದು ಈ ತರಹದ ಕೇಂದ್ರ ಸರ್ಕಾರದ ನಿರ್ಧಾರವನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿರೋಧಿಸಬೇಕು, ಈ ಬಗ್ಗೆ ಸದನದಲ್ಲೂ ನಿರ್ಣಯವಾಗಬೇಕು, ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಕೇಂದ್ರಕ್ಕೊಂದು ನಿಯೋಗ ಹೋಗಬೇಕಾಗಿದೆ. ಇಲ್ಲದಿದ್ದರೆ, ಕರ್ನಾಟಕದಲ್ಲಿ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗುತ್ತದೆಂದು ಹೇಳಿ, ತಾವು ಮುಖ್ಯಮಂತ್ರಿಗಳಿಂದ ಭರವಸೆ ಕೊಡಿಸಬೇಕೆನ್ನುತ್ತಾ ನಾನು ಧರಣಿ ಮಾಡುತ್ತಿದ್ದೇನೆ.

ಅಧ್ಯಕ್ಷರು:— ಧರಣಿ ಬೇಡ. ನಾನು ತಮಗೆ ಏನು ಹೇಳುತ್ತೇವೆಂದರೆ, ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೇಳಿದಾಗಲೇ ಹೇಳಿದ್ದೆ. ನಿನ್ನೆಯೇ ಶ್ರೀ ಶಿವರಾಮೇಗೌಡರ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನೂ ಪ್ರಸ್ತಾಪಮಾಡುವುದರಿಂದ ಅವರ ಭಾಷಣ ಮುಗಿಸಲು ಅವಕಾಶ ನೀಡಬೇಕು. ತೀರ್ಮಾನ ಮಾಡಿದ್ದು, ಅದು ಪ್ರಮುಖವಾದ ವಿಚಾರವಾಗಿರುವುದರಿಂದ ಅವರು ಮಾಡಲು ಮಾತನಾಡಲಿ. ಅವರೂ ನಿಮ್ಮ ಸ್ನೇಹಿತರು. ಅವರ ಮೇಲಿರುವ ವಿಶ್ವಾಸಕ್ಕಾದರೂ ತಾವು ತಮ್ಮ ಸ್ಥಾನದಲ್ಲಿ ಕುಳಿತಿರಬೇಕು. ನಿಮ್ಮ ಸಲಹೆಗಳನ್ನು ಮಧ್ಯೆ ಮಧ್ಯೆ ಅವರಿಗೆ ಕೊಡಬೇಕು. ಆಮೇಲೆ, ಮುಖ್ಯಮಂತ್ರಿಗಳು ಬಂದ ನಂತರ, ಅವರಿಗೆ ವಿಚಾರವನ್ನು ಹೇಳೋಣ. ನಾನು ಅವರಿಗೆ ತಿಳಿಸುತ್ತೇನೆ. ಧರಣಿ ಬೇಡ. ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ಶ್ರೀ ಸುರೇಶ್‌ಕುಮಾರ್‌ರವರು ಮಾತನಾಡುವಾಗ ನಿಮ್ಮ ಮೇಲೆ ಅಪಾದನೆ ಮಾಡಿಲ್ಲ.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):— ಈ ವಿಚಾರದಲ್ಲಿ ಇಡೀ ಕರ್ನಾಟಕ ರಾಜ್ಯದ ನಾವೆಲ್ಲ ಒಂದಾಗಿರೋಣ. ಶ್ರೀ ವಾಟಾಳ್‌ರವರು ಕನ್ನಡದ ಪರವಾಗಿ ಹೋರಾಡಿದ ಬಗ್ಗೆ ಇಡೀ ರಾಜ್ಯದಲ್ಲಿ ಯಾರೂ ಅಡ್ಡ ಬರುವ ಪ್ರಶ್ನೆ ಬರುವುದಿಲ್ಲ. ಯಾರಾದರೂ ಒಂದು ಮಾತು ಏನಾದರೂ ಹೇಳಿದರೆ, ಅವರ ಬಾಯಲ್ಲಿ ಹುಳ ಬೀಳುತ್ತದೆ. ಆದರೆ, ಈ ಒಂದು ವಿಚಾರದಲ್ಲಿ ಅವರೇನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೇ ಇಡೀ ರಾಜ್ಯದ ಜನರು ಒಟ್ಟಾಗಿರೋಣ. ಆ ಪಕ್ಷ, ಈ ಪಕ್ಷ ಎಂದಲ್ಲ. ಶ್ರೀ ವಾಟಾಳ್‌ರವರಿಗೂ ಗೊತ್ತು, ವಿಧಾನಪರಿಷತ್ ಸದಸ್ಯರಾಗಿರುವ ಶ್ರೀ ಮುಖ್ಯಮಂತ್ರಿ ಚಂದ್ರುರವರೂ ಕೂಡ, ಅವರ ನೇತೃತ್ವದಲ್ಲಿ ಡೆಲ್ಲಿಗೆ ಹೋಗಿ ಎಲ್ಲಾ ಪ್ರಯತ್ನ ಮಾಡಿದ್ದು, ಆ ಹೋರಾಟಕ್ಕೆ ನಾವೆಲ್ಲಾ ಬೆಂಬಲ ಕೊಟ್ಟಿದ್ದೇವೆ, ಅದು ಯಶಸ್ವಿಯಾಗಿದೆ. ಹೀಗಾಗಿ, ಈ ವಿಚಾರದಲ್ಲಿ ಹಿಂದೆ, ಮುಂದೆ ಇಲ್ಲ. ಮುಖ್ಯಮಂತ್ರಿಗಳು ಬರಲಿ, ರಾಜ್ಯ ಸರ್ಕಾರದ ಜೊತೆ ನಾವೆಲ್ಲಾ ಒಟ್ಟಾಗಿರೋಣ. ನನಗಿರುವ ಅನುಮಾನವೆಂದರೆ, ಪತ್ರಿಕೆಯಲ್ಲಿ ಬಂದಿರುವುದು ಊಹೆ ಇರಬಹುದು, ಯಾರಾದರೂ ಈ ರೀತಿ ಮಾಡಿರಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಿಮ್ಮವರೇ ಸೆಂಟ್ರಲ್ ಮಿನಿಸ್ಟರ್‌ರವರು ತಮಿಳರಿಗೆ ಕೊಡಬೇಕೆಂದು ಹೇಳಿದ್ದಾರಲ್ಲಾ, ಈ ದ್ವಂದ್ವ ನೀತಿ ಏನು? ನೀವು ಅವರಿಗೆ ಹೇಳಬೇಕಾಗಿತ್ತು.

ಶ್ರೀ ಕೆ.ಎಸ್. ಈಶ್ವರಪ್ಪ :— ಈ ವಿಚಾರದಲ್ಲಿ ಕರ್ನಾಟಕದವರೆಲ್ಲಾ ಒಂದಾಗಿರೋಣ. ನೀವು ನೂರು ಜನ ನೂರು ಮಾತನಾಡಿ, ಅದರ ಬಗ್ಗೆ ಅಲ್ಲ. ಈಗ ಆ ಸಮಸ್ಯೆನೇ ಇಲ್ಲ. ಇದ್ದರೆ ನಾವುಗಳೆಲ್ಲಾ ಒಂದಾಗಿ ಸೇರಿ ತೀರ್ಮಾನ ತೆಗೆದುಕೊಳ್ಳೋಣ. ನಾವುಗಳೆಲ್ಲಾ ಮಾತ್ರ ಒಗ್ಗಟ್ಟಾಗಿಯೇ ಇದ್ದೇವೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಅಧ್ಯಕ್ಷರೆ, ಇದೊಂದು ಗಂಭೀರವಾದ ವಿಷಯವಾಗಿರುವುದರಿಂದ ಮುಖ್ಯಮಂತ್ರಿಯವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು. ಕೇಂದ್ರ ಸರ್ಕಾರದವರು ತಮಿಳರಿಗೇ ನ್ಯಾಯವನ್ನು ಕೊಡುವುದಾಗಿದ್ದರೆ ನಮ್ಮನ್ನು ಕಡೆಗಣಿಸಿದಂತಾಗುತ್ತದಲ್ಲವೆ?

ಅಧ್ಯಕ್ಷರು :— ವಿಧಾನಸಭೆಯಲ್ಲಿ ನಾವ್ಯಾರೂ ಸಹ ನೆಗೆಟೀವ್ ಟೋನ್‌ನಲ್ಲಿ ಮಾತನಾಡುವುದು ಬೇಡ. ನಾವೆಲ್ಲರೂ ಪಾಸಿಟೀವ್‌ಆಗಿ ಮಾತನಾಡೋಣ. ಇವರು ತಮಿಳರು ಎಂದು ಹೇಳಿ ಅವರನ್ನು ಪ್ರತ್ಯೇಕಿಸುವುದು ಬೇಡ. ನಮ್ಮದು ಗಣರಾಜ್ಯ. ಇದೇ ರಿಪಬ್ಲಿಕ್ ನಾವೂ ಅದರ ಒಂದು ಭಾಗ. ಮಾನ್ಯ ಸುರೇಶ್‌ರವರು ಹೇಳಿದಂತೆ ಇದು ಕರ್ನಾಟಕ ರಾಜ್ಯ ಇಲ್ಲಿ ಎಲ್ಲಾ ವ್ಯವಹಾರಗಳು ಕನ್ನಡದಲ್ಲೇ ಆಗಬೇಕು. ಜನಸಾಮಾನ್ಯರಿಗೆ ಎಲ್ಲಿ ಆಗುವ ವ್ಯವಹಾರದ ಪರಿಚಯವಾಗಬೇಕು. ಅನ್ಯ ಭಾಷಿಕರು

ಬಂದರೆ ನಮ್ಮ ಜನರಿಗೆ ವ್ಯವಹಾರ ಅರ್ಥವಾಗುವುದಿಲ್ಲ. ಇಷ್ಟಕ್ಕೆ ಮಾತ್ರ ನಾವು ನಿಲ್ಲಿಸೋಣ. ಇನ್ನೊಬ್ಬರ ಬಗ್ಗೆ ಮಾತನಾಡುವ ಅಗತ್ಯ ನಮಗಿಲ್ಲ. ನಮ್ಮ ಸೌಕರ್ಯ ನಮ್ಮದು. ಒಟ್ಟಿನಲ್ಲಿ ನಮ್ಮ ಜನರಿಗೆ ಅನುಕೂಲವಾಗಬೇಕು. ನಮ್ಮ ಭಾಷೆ ಗೊತ್ತಿರುವವರು ಇರಬೇಕು. ಅವರು ಮಾತನಾಡತಕ್ಕದ್ದು, ಹೇಳತಕ್ಕದ್ದು ನಮ್ಮ ಜನರಿಗೆ ಅರ್ಥವಾಗಬೇಕು.

ಶ್ರೀ ವಾಟಾಳ್ ನಾಗರಾಜ್ :— ಆಯಾಯ ಭಾಷೆಯನ್ನು ಮಾತನಾಡತಕ್ಕ ಪ್ರದೇಶಗಳು ಸೇರಿ ಭಾಷಾವಾರು ಪ್ರಾಂತ್ಯ ರಚನೆ ಆಗಿದ್ದು 1956ರಲ್ಲಿ ಆದರೆ ಈಗ ಭಾಷಾವಾರು ತತ್ವಕ್ಕೆ ವಿರುದ್ಧವಾಗುತ್ತಿದೆ. ಇದರ ಬಗ್ಗೆ ನಾವು ಎಚ್ಚರಿಕೆ ವಹಿಸದಿದ್ದರೆ ಕರ್ನಾಟಕ ಬೇರೆಯವರ ಕೈಗೆ ಹೋಗುತ್ತದೆ. ಇದರ ಬಗ್ಗೆ ಅನುಮಾನಪಡಬೇಕಾಗಿಲ್ಲ.

(2) ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಚರ್ಚೆ

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) :— ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಾ ಕೃಷಿ, ನೀರಾವರಿ ಇಲಾಖೆಯ ಬಗ್ಗೆ, ಮೊನ್ನೆ ವಸತಿ ಮತ್ತು ಶಿಕ್ಷಣ ಇಲಾಖೆಗಳ ಬಗ್ಗೆ ಮಾತನಾಡಿದ್ದೆ. ಇಂದು ಕರ್ನಾಟಕ ನಗರ ನೀರು ಮತ್ತು ಒಳಚರಂಡಿ ಮಂಡಳಿಯ ಬಗ್ಗೆ ಮಾತನಾಡಲಿಯುಸುತ್ತೇನೆ. 1975ರಲ್ಲಿ ಕೆ.ಡಬ್ಲ್ಯೂ.ಎಸ್.ಎಸ್. ಅಸ್ತಿತ್ವಕ್ಕೆ ಬಂತು. ಈ 25 ವರ್ಷಗಳಲ್ಲಿ 214 ಪಟ್ಟಣಗಳಲ್ಲಿ ನಗರ ನೀರು ಸರಬರಾಜು ಮಾಡಬೇಕು ಒಳಚರಂಡಿ ಸೌಲಭ್ಯವನ್ನು ಒದಗಿಸಬೇಕು ಎನ್ನತಕ್ಕ ಪ್ರಯತ್ನವನ್ನು ಈ ಇಲಾಖೆಯಲ್ಲಿ ಮಾಡಲಾಗಿದೆ. ಇದುವರೆಗೆ 298 ಯೋಜನೆಗಳನ್ನು ಮಾಡಲಾಗಿದೆ. 1975ರಿಂದ 1984 ರವರೆಗೆ ಈ ಇಲಾಖೆ 440 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ತನ್ನ ಕಾರ್ಯವನ್ನು ಮಾಡಿದೆ. 1994 ರಿಂದ 1999ರವರೆಗೆ ವರ್ಷಕ್ಕೆ 110 ಕೋಟಿ ರೂಪಾಯಿಗಳಂತೆ 440 ಕೋಟಿ ರೂಪಾಯಿ ಕೆಲಸವನ್ನು ಕರ್ನಾಟಕ ನಗರ ಒಳಚರಂಡಿ ನೀರು ಸರಬರಾಜು ಮಂಡಳಿಯ ಆಶ್ರಯದಲ್ಲಿ ಕೆಲಸಗಳು ಆಗಿದೆ. 118 ಯೋಜನೆಗಳು ಈಗಾಗಲೇ ಕೆಲಸ ಪೂರ್ಣವಾಗಿ ಅಸ್ತಿತ್ವದಲ್ಲಿ ಬಂದಿದೆ. ಏಶಿಯನ್ ಡೆವಲಪ್ ಮೆಂಟ್ ಬ್ಯಾಂಕ್ ನಿಂದ ಹಣವನ್ನು ಸಾಲವಾಗಿ ತೆಗೆದುಕೊಂಡು ಮೊದಲ ಹಂತದ ಯೋಜನೆಯಲ್ಲಿ ಮೈಸೂರು, ತುಮಕೂರು, ಚನ್ನಪಟ್ಟಣ, ರಾಮನಗರಗಳಿಗೆ ನೀರನ್ನು ಒದಗಿಸುವ 172 ಕೋಟಿ ರೂ. ವೆಚ್ಚದ ಯೋಜನೆಯ ಕೆಲಸವನ್ನು ಮಾಡುತ್ತಿದ್ದೇವೆ. ಹಾಗೆಯೆ ಹುಡ್ಕೋನಿಂದ 14 ಕುಡಿಯುವ ನೀರಿನ ಯೋಜನೆಗಳಿಗೆ ಮೊದಲ ಹಂತದಲ್ಲಿ 262 ಕೋಟಿ ಸಾಲವನ್ನು ತೆಗೆದುಕೊಂಡಿದ್ದೇವೆ. ಎರಡನೆ ಹಂತದಲ್ಲಿನ ಯೋಜನೆಗೆ 26 ಕೋಟಿ ಸಾಲ ತೆಗೆದುಕೊಳ್ಳುತ್ತಿದ್ದೇವೆ. ಈ ಎಲ್ಲಾ ಯೋಜನೆಗಳು